


# ಡ್ರಾಸ್ಟ್ರಿಂಗ್ ಬ್ಯಾಗ್

ಈ ಟ್ಯುಟೋರಿಯಲ್ ನಲ್ಲಿ ನೀವು ಡ್ರಾಸ್ಟ್ರಿಂಗ್ ಬ್ಯಾಗ್ ಮಾಡುವುದನ್ನು ಕಲಿಯುವಿರಿ.




ಕಲಿಯುವಿರಿ. ಬೇಗನೆ ಮಾಡಬಹುದು ಮತ್ತು ಸುಲಭ ಮತ್ತು ವಸ್ತುಗಳನ್ನು ತುಂಬಲು ಮತ್ತು ಅದನ್ನು ನೇತು ಹಾಕಲು ಬಹಳಾ ಅನುಕೂಲಕರ, ಈ ಬ್ಯಾಗ್ ಪುಸ್ತಕಗಳಿಂದ ಹಿಡಿದು ಯಾವುದೇ ಪರಿಕರಗಳನ್ನು ಸಾಗಿಸಲು ಬಳಸಬಹುದು ಮತ್ತು ದೂರದ ಪ್ರಯಾಣಗಳಲ್ಲಿ ಉತ್ತಮ ಸಹಪಾಟಿ ಕೂಡ.

ಈ ಬ್ಯಾಗನ್ನು ತಯಾರಿಸಲು ನಿಮಗೆ ಬೇಕಾಗಿರುವುದು- 17 x 14 ಇಂಚು ತುಂಡು ಬಟ್ಟೆ, 12 ಅಡಿ ಉದ್ದದ ಹಗ್ಗ, ದಾರಗಳು, ಹಗ್ಗವನ್ನು ತೂರಿಸುವ ಸಲುವಾಗಿ ಪ್ಲಾಸ್ಟಿಕ್ ಸೂಜಿ, ಮತ್ತು ಐರನ್ ಬಾಕ್ಸ್.

ಈಗ ನಾಲ್ಕು ತುದಿಗಳೊಂದಿಗೆ ಪ್ರಾರಂಭಿಸೋಣ - ಉದ್ದಕ್ಕೂ 5 ಅಂಗುಲಗಳಷ್ಟು ಅಂಚುಗಳನ್ನು ಮಡಚಿ... ಈ ರೀತಿ ಮತ್ತು ಅದನ್ನು ಐರನ್ ಮಾಡಿ. ಎರಡು ಮಡಕೆ ಮಾಡಿ ಮತ್ತು ಐರನ್ ಮಾಡುವುದನ್ನು ಮುಂದುವರಿಸಿ. ಟ್ಯುಟೋರಿಯಲ್ ನಲ್ಲಿ ತೋರಿಸಿದಂತೆ ಬಟ್ಟೆಯ ಉದ್ದದ ಎಲ್ಲಾ ನಾಲ್ಕು ಅಂಚುಗಳಲ್ಲೂ ಇದೇ ರೀತಿ ಮಾಡಿ.

ಈಗ ಸ್ಟಿಚ್ ಪ್ಯಾಟರ್ನ್ ಸೆಲೆಕ್ಟರ್ ಅನ್ನು A ಗೆ ತಿರುಗಿಸುವ ಮೂಲಕ ಮಶೀನಿನನ್ನು ಸಿದ್ಧಪಡಿಸಿಕೊಳ್ಳಿ ಮತ್ತು ಸ್ಟಿಚ್ ಲೆಂಥ್ ಅನ್ನು 2.5 ಕ್ಕೆ ಹೊಂದಿಸಿ.

ನೀವು ಟ್ಯುಟೋರಿಯಲ್ ನಲ್ಲಿ ನೋಡುತ್ತಿರುವಂತೆ ನಾವು ಐರನ್ ಮಾಡಿ ಮಡಚಿದ ಬದಿಗಳನ್ನು ಹೊಲಿಯುತ್ತೇವೆ. ಒಮ್ಮೆಗೆ ಒಂದು ಅಂಚನ್ನು ಹೊಲಿಯುವುದನ್ನು ಪ್ರಾರಂಭಿಸಿ. ಒಮ್ಮೆ ನೀವು ನಾಲ್ಕೂ ತುದಿಗಳನ್ನು ಹೊಲಿಯುವುದನ್ನು ಪೂರ್ಣಗೊಳಿಸಿದ ನಂತರ, ಎಲ್ಲಾ ಹೆಚ್ಚುವರಿ ದಾರಗಳನ್ನು ಟ್ರಿಮ್ ಮಾಡಿ.

ಈಗ ಅಗಲ ಭಾಗದಲ್ಲಿ - ನೀವು ಟ್ಯುಟೋರಿಯಲ್ ನಲ್ಲಿ ನೋಡಬಹುದು, ಮೊದಲು ಅರ್ಧ ಇಂಚು ಮಡಚಿ.





ಅದನ್ನು ಐರನ್ ಮಾಡಿ. ಮತ್ತೊಮ್ಮೆ ಒಂದು ಇಂಚಷ್ಟು ಮಡಚಿ ನಂತರ ಐರನ್ ಮಾಡಿ. ಇನ್ನೊಂದು ಬದಿಯಲ್ಲಿ ಪುನರಾವರ್ತಿಸಿ.

ಈಗ ಮಡಚಿದ ಅಂಚುಗಳ ಉದ್ದಕ್ಕೂ ಹೊಲಿಯಿರಿ. ಇವುಗಳು ಮಡಿಕೆಗಳಾಗುತ್ತವೆ. ರಿವರ್ಸ್ ಸ್ಟಿಚ್ ಬಳಸಿಕೊಂಡು ಎರಡು ತುದಿಗಳಲ್ಲಿಯೂ ಹೊಲಿಗೆಗಳನ್ನು ಲಾಕ್ ಮಾಡಲು ಮರೆಯದಿರಿ. ಇನ್ನೊಂದೆಡೆಯೂ ಹೊಲಿಯಿರಿ.

ಹೆಚ್ಚುವರಿ ದಾರವನ್ನು ಕತ್ತರಿಸಿ. ನಾವು ನಮ್ಮ ಟಾಪ್ ಟನಲಿಂಗ್ ಅನ್ನು ಪೂರ್ಣಗೊಳಿಸಿದ್ದೇವೆ.

ಮುಂದೆ ನಾವು ಈ ಪ್ಲಾಸ್ಟಿಕ್ ಸೂಜಿಯ ಸಹಾಯದಿಂದ, ಟನಲ್ ನ ಒಳಗೆ ಹಗ್ಗವನ್ನು ತೂರಿಸುತ್ತೇವೆ.



ಸೂಜಿಯೊಳಗೆ ಹಗ್ಗವನ್ನು ತೂರಿಸಿದ ನಂತರ ಒಂದು ಗಂಟನ್ನು ಹಾಕಿ ನಂತರ ಈ ರೀತಿಯಲ್ಲಿ ಸೂಜಿಯನ್ನು ಟನಲ್ ನ ಒಂದು ತುದಿಯಿಂದ ಮತ್ತೊಂದು ತುದಿಗೆ ಸೇರಿಸಿ. ನಂತರ ನೀವು ಟ್ಯುಟೋರಿಯಲ್ ನಲ್ಲಿ ನೋಡುವಂತೆ ಅದನ್ನು ಬಟ್ಟೆಯ ಇನ್ನೊಂದು ತುದಿಯಲ್ಲಿರುವ ಟನಲ್ ನ ಒಳಗೆ ಸೇರಿಸಿ. ಸೂಜಿಯನ್ನು ಹೊರಗೆ ತೆಗೆಯಿರಿ ಮತ್ತು ಅದನ್ನು ಭದ್ರಪಡಿಸುವ ಸಲುವಾಗಿ ಹಗ್ಗದಲ್ಲಿ ಒಂದು ಗಂಟನ್ನು ಹಾಕಿ. ಬೇಕಾದ ಉದ್ದದ ಹಗ್ಗವನ್ನು ತೆಗೆದುಕೊಂಡು ಕತ್ತರಿಸಿ.



ನಂತರ ಮತ್ತೊಂದು ಹಗ್ಗವನ್ನು ಸೇರಿಸಲು ಸೂಜಿ ಮತ್ತು ಹಗ್ಗವನ್ನು ಬಳಸಿ. ಈ ಬಾರಿ ಮತ್ತೊಂದು ಬದಿಯಿಂದ ಪ್ರಾರಂಭಿಸಿ. ಅದೇ ರೀತಿಯಲ್ಲಿ ಎರಡೂ ತುದಿಗಳಲ್ಲಿ ಟನಲ್ ನ ಒಳಗೆ ಹಗ್ಗವನ್ನು ತೂರಿಸಿ.

ಅದಾದ ನಂತರ, ತುದಿ ಭಾಗವನ್ನು ಕತ್ತರಿಸಿ ಮತ್ತು ಗಂಟು ಹಾಕಿ.



ಎರಡೂ ಹಗ್ಗಗಳು ಸಮಾನ ಉದ್ದದಲ್ಲಿವೆಯೆಂದು ಖಚಿತಪಡಿಸಿಕೊಳ್ಳಿ. ಇದನ್ನು ಸರಿಯಾಗಿ ಅರ್ಥಮಾಡಿಕೊಳ್ಳಲು ಟ್ಯುಟೋರಿಯಲ್ ನಲ್ಲಿ ತೋರಿಸಿರುವ ಹಂತಗಳನ್ನು ಅನುಸರಿಸಿ.

ಈ ರೀತಿಯಲ್ಲಿ ಬಟ್ಟೆಯ ನಡುವೆ ಹಗ್ಗಗಳನ್ನು ಇಟ್ಟುಕೊಳ್ಳುವ ಮೂಲಕ, ಈಗ ಒಂದೇ ಬದಿಯಲ್ಲಿರುವ ಎರಡೂ ಹಗ್ಗದ ತುದಿಗಳನ್ನು ತೆಗೆದುಕೊಂಡು ಅದನ್ನು ಮಡಿಕೆಯ ಕೆಳಭಾಗದಲ್ಲಿ ಇರಿಸಿ. ಅದು ಅಲ್ಲಾಡದಿರಲು ಕೆಳಭಾಗದಲ್ಲಿರುವ ಹಗ್ಗಗಳನ್ನು ಪಿನ್ ಮಾಡಿ. ಬದಿಯಲ್ಲಿಯೂ ಸಹ ಪಿನ್ ಮಾಡಿ.




ಇನ್ನೊಂದು ಕಡೆಯಲ್ಲಿರುವ ಎರಡು ಹಗ್ಗಗಳಿಗೆ ಇದನ್ನು ಪುನರಾವರ್ತಿಸಿ.

ಈಗ ಎರಡೂ ಕಡೆಗಳಲ್ಲಿ ಪಿನ್ ಮಾಡಲಾದ ಅಂಚುಗಳನ್ನು ಹೊಲಿಯಿರಿ. ಬಲಕ್ಕಾಗಿ ಪ್ರಾರಂಭದ ಮತ್ತು ಕೊನೆಯ ಭಾಗದಲ್ಲಿ ನೀವು ರಿವರ್ಸ್ ಹೊಲಿಗೆ ಹಾಕಿದ್ದೀರೆಂದು ಖಚಿತಪಡಿಸಿಕೊಳ್ಳಿ. ಹೊಲಿಯುವಾಗ ಹಗ್ಗಗಳು ಒಳಗೇ ಇವೆ ಎಂಬುದನ್ನು ಖಚಿತಪಡಿಸಿಕೊಳ್ಳಿ.

ನೀವು ಹೊಲಿಯುತ್ತಾ ಹೋದಂತೆ ಪಿನ್ಗಳನ್ನು ತೆಗೆಯುವುದನ್ನು ಮರೆಯದಿರಿ. ಹೆಚ್ಚುವರಿ ಹಗ್ಗಗಳು ಮತ್ತು ದಾರಗಳನ್ನು ಕತ್ತರಿಸಿ. ಮುಂದೆ ನಾವು ಓವರ್-ಎಡ್ಜಿಂಗ್ ಗಾಗಿ ಬದಿಗಳಲ್ಲಿ ಝಿಗ್-ಝಾಗ್ ಸ್ಟಿಚ್ ಮಾಡುತ್ತೇವೆ.

ಪ್ಯಾಟರ್ನ್ ಸೆಲೆಕ್ಟರ್ ಅನ್ನು C ಗೆ ಮತ್ತು ಸ್ಟಿಚ್ ಲೆಂಥ್ ಅನ್ನು 1.5 ಗೆ ಹೊಂದಿಸಿ.
ಅಂಚುಗಳ ಉದ್ದಕ್ಕೂ ಹೊಲೆಯಿರಿ.

ಹೆಚ್ಚುವರಿ ದಾರವನ್ನು ಕತ್ತರಿಸಿ. ಬ್ಯಾಗ್ ಅನ್ನು ಸರಿಯಾದ ಕಡೆಗೆ ಬದಲಿಸಿ. ನಿಮ್ಮ ಡ್ರಾಸ್ಟ್ರಿಂಗ್ ಬ್ಯಾಗ್ ಸಿದ್ಧವಾಗಿದೆ.

ಡ್ರಾಸ್ಟ್ರಿಂಗ್ ಬ್ಯಾಗ್ ಗಳು ಮಾಡಲು ತುಂಬಾ ಸುಲಭ ಮತ್ತು ಬಳಸಲು ಮತ್ತು ಸಾಗಿಸಲು ತುಂಬಾ ಸೂಕ್ತವಾದುದು. ಸ್ಟೈಲಿಶ್ ಮತ್ತು ಮೋಜಿನದ್ದು ಮತ್ತು ನೀವು ಅದನ್ನು ಯಾವುದಕ್ಕಾದರೂ ಬಳಸಬಹುದು. ನಿಮಗೆ ಬ್ಯಾಗ್ ಗಳೆಂದರೆ ಇಷ್ಟವಿದ್ದರೆ ನಮ್ಮ ಇತರ ಬ್ಯಾಗ್ ಟ್ಯುಟೋರಿಯಲ್ಗಳನ್ನು ಕೂಡ ನೋಡಿ. ಅದ್ಭುತ ಅಲ್ಲವೇ!

